# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 172 |
| ಸದಸ್ಯರ ಹೆಸರು | : | ಶ್ರೀ ಬಿ.ಎಂ.ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಮಂಗಳೂರಿನ ಬೈಕಂಪಾಡಿ ಕೈಗಾರಿಕಾ ಪ್ರದೇಶ ಮತ್ತು ಪಣಂಬೂರು ಬಂದರು ಪ್ರದೇಶ ಮಧ್ಯೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯು ಬೈಕಂಪಾಡಿ ಮೇಲ್ಸೇತುವೆ ಬಳಿ ಅಗಲ ಕಿರಿದಾಗಿ ಸಂಚಾರ ದಟ್ಟಣೆ ಗಂಭೀರ ಸಮಸ್ಯೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ರಾಷ್ಟ್ರೀಯ ಹೆದ್ದಾರಿ-66 ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯವ್ಯಾಪ್ತಿಗೆ ಒಳಪಡುತ್ತದೆ.<br><br>ಸದರಿ ಹೆದ್ದಾರಿಯು ಮಂಗಳೂರಿನ ಬೈಕಂಪಾಡಿ ಕೈಗಾರಿಕಾ ಪ್ರದೇಶ ಮತ್ತು ಪಣಂಬೂರು ಬಂದರು ಪ್ರದೇಶ ಮಧ್ಯೆ ಹಾದು ಹೋಗುತ್ತಿದ್ದು, ಸದರಿ ಹೆದ್ದಾರಿಯನ್ನು ಪೇವಡ್ ಶೋಲ್ಡರ್‌ನೊಂದಿಗೆ ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. ಅಲ್ಲದೇ, ಬೈಕಂಪಾಡಿ ಬಳಿಯ ವಾಹನ ದಟ್ಟಣೆಯನ್ನು ತಗ್ಗಿಸಲು VUP ಯೊಂದಿಗೆ ಹೆದ್ದಾರಿಯ ಎರಡು ಭಾಗಗಳಲ್ಲಿ ROB ಮರು ನಿರ್ಮಾಣಕ್ಕಾಗಿ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಗುತ್ತಿಗೆದಾರರು ಹೆದ್ದಾರಿಯ ಬಲಭಾಗದಲ್ಲಿ VUP ಯೊಂದಿಗೆ ROB ನಿರ್ಮಿಸಿರುತ್ತಾರೆ. ಆದರೆ ಸ್ಥಳೀಯ ಪೊಲೀಸ್ ಇಲಾಖೆಯಿಂದ ವಾಹನ ಸಂಚಾರಕ್ಕೆ ಪರ್ಯಾಯ ವ್ಯವಸ್ಥೆಗಾಗಿ ಅನುಮತಿಯನ್ನು ನಿಗಧಿತ ಸಮಯದೊಳಗೆ ನೀಡದ ಕಾರಣ ಹೆದ್ದಾರಿಯ ಎಡಭಾಗದಲ್ಲಿ ROB ಯನ್ನು ನಿರ್ಮಾಣ ಮಾಡುವ ಕಾರ್ಯವನ್ನು ಕೈಬಿಡಲಾಗುತ್ತದೆ.<br><br>ಪ್ರಸ್ತುತ ಕುದುರೆಮುಖ ಐರನ್ ಓರ್ ಕಂಪನಿ ಜಂಕ್ಷನ್‌ನಿಂದ ಬೈಕಂಪಾಡಿವರೆಗೆ ಸುಮಾರು 3 ಕಿ.ಮೀ ವರೆಗೆ ಚತುಷ್ಪಥ ಮೇಲ್ಸೆತುವೆಯನ್ನು ನಿರ್ಮಿಸಲು ಕಾರ್ಯಸಾಧ್ಯತಾ ವರದಿಯನ್ನು ಹೊಸ ಮಂಗಳೂರು ಬಂದರು ಪ್ರಾಧಿಕಾರ (NMPA) ನೀಡಿದ್ದು ಅದರಂತೆ, ಮೆ: ಇಂಡಿಯನ್ ಪೋರ್ಟ್-ರೈಲು ಮತ್ತು ರೋಪ್‌ವೇ ಕಾರ್ಪೋರೇಷನ್ ಲಿಮಿಟೆಡ್ (ಪಿಆರ್‌ಸಿಎಲ್) ಎನ್‌ಹೆಚ್‌ಎಐ ಕೇಂದ್ರ ಸ್ಥಾನ ಪೋರ್ಟ್ ಕನೆಕ್ಟಿವಿಟಿ ಡಿವಿಷನ್ ವತಿಯಿಂದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಗುತ್ತಿಗೆ ಕರೆಯಲಾಗಿದ್ದು ಮೆ: ಚೈತನ್ಯ ಪ್ರಾಜೆಕ್ಟ್ ಕನ್ಸಲ್ಟೆನ್ಸಿ ಪ್ರೈವೇಟ್‌ರವರಿಗೆ ಗುತ್ತಿಗೆ ನೀಡಲಾಗಿರುತ್ತದೆ. |
| ಆ) | NHAI ಸುಪರ್ದಿನಲ್ಲಿರುವ ಈ ಹೆದ್ದಾರಿಯನ್ನು ಸುಗಮ ಸಂಚಾರ ಕಲ್ಪಿಸಲು ಸರ್ಕಾರದ ಕಾರ್ಯ ಯೋಜನೆಗಳೇನು; (ವಿವರ ನೀಡುವುದು) | |
| ಇ) | ಬಂದರು - ಕೈಗಾರಿಕಾ ಪ್ರದೇಶಗಳ ಸರಕು ಸಾಗಣೆ - ಘನವಾಹನಗಳು ಬೈಕಂಪಾಡಿ ಮೇಲ್ಸೇತುವೆಯನ್ನೇ ಬಳಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸ್ತುತ ರಾಷ್ಟ್ರೀಯ ಹೆದ್ದಾರಿ-66 ರ KIOCL ಜಂಕ್ಷನ್‌ನಿಂದ ಬೈಕಂಪಾಡಿರವರೆಗೆ ಮೇಲ್ಸೇತುವೆಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸುವ ಕಾರ್ಯ ಪ್ರಗತಿಯಲ್ಲಿದ್ದು, ಸದರಿ ವರದಿಯಲ್ಲಿ ಸರಕು ವಾಹನಗಳು, ಸ್ಥಳೀಯ ವಾಹನಗಳು ಹಾಗೂ ರಾಷ್ಟ್ರೀಯ ಹೆದ್ದಾರಿ-66 ರಿಂದ ಸಂಚರಿಸುವ ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಅಲ್ಲದೇ, ಕಾರ್ಯಸಾಧ್ಯತಾ ವರದಿಯನ್ನು ತಯಾರಿಸುವಾಗ NHAI, ರೈಲ್ವೆ ಇಲಾಖೆ ಬಂದರು ಪ್ರಾಧಿಕಾರರವರ ಮಧ್ಯೆ ಹಲವು ಸಭೆಗಳನ್ನು |

| | | |
|---|---|---|
| ಈ) | ಹಾಗಿದ್ದಲ್ಲಿ ಮೊದಲು ಇದ್ದಂತೆ ಸೇತುವೆ ಕೆಳಗಿನ ರಸ್ತೆಯನ್ನು ಸರಕು-ಘನವಾಹನ ಸಂಚಾರಕ್ಕಾಗಿ ಅಭಿವೃದ್ಧಿಪಡಿಸಿ, ಮೇಲ್ಸೇತುವೆಯನ್ನು ಸರಾಗ-ಸುಗಮ ಸಂಚಾರಕ್ಕಾಗಿ ವ್ಯವಸ್ಥೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ನಡೆಸಲಾಗಿರುತ್ತದೆ. ಯೋಜನಾ ವರದಿಯನ್ನು ಅಂತಿಮಗೊಳಿಸಿದ ನಂತರ, ಪ್ರಯಾಣಿಕರ ಸಮಸ್ಯೆಯನ್ನು ಬಗೆಹರಿಸಲು ಸದರಿಯವರೊಂದಿಗೆ ಸಹಯೋಗ - ಸಮನ್ವಯ ಸಭೆಯನ್ನು ನಡೆಸಲಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |
| ಉ) | NHAI - ರೈಲ್ವೇ ಇಲಾಖೆ-ಬಂದರು ಪ್ರಾಧೀಕಾರದ ಮಧ್ಯೆ ಸಹಯೋಗ-ಸಮನ್ವಯತೆಯನ್ನು ಏರ್ಪಡಿಸಿ ಸಾರ್ವಜನಿಕರ-ಪ್ರಯಾಣಿಕರ ನರಳಾಟ, ಜೀವಾಪಾಯ ಇತ್ಯಾದಿ ಸಮಸ್ಯೆ ಬಗೆಹರಿಸುವತ್ತ ಸರ್ಕಾರ ಕಾರ್ಯ ಪ್ರವೃತ್ತವಾಗುವುದೇ (ವಿವರ ನೀಡುವುದು) | |

**ಸಂಖ್ಯೆ: ಲೋಇ 130 ಸಿಎನ್‌ಹೆಚ್ 2023(ಇ)**

**(ಸತೀಶ ಜಾರಕಿಹೊಳಿ)**
**ಲೋಕೋಪಯೋಗಿ ಸಚಿವರು,**